ಎಂಬ ಸಮಾಜವಾದಿಗಳ ಅತಿ ಆತ್ಮವಿಶ್ವಾಸ. ಸಿದ್ಧಾಂತ ಎಷ್ಟೇ ಸೂಕ್ತವಾದದ್ದಾದರೂ, ನಮ್ಮಲ್ಲಿ ಸೋಮಾರಿತನ, ಗುಂಪುಗುಳಿತನ, ಅಸಾಮರ್ಥ್ಯಗಳಿದ್ದಾಗ ನಾವು ಮುನ್ನಡೆಯಲು ಸಾಧ್ಯವಿಲ್ಲ.'

ಲೋಕಸಭಾ ಚುನಾವಣೆಗೆ ಮುನ್ನ ನಡೆದ ಈ ಸಮಾಜವಾದಿ ಸ್ವ–ವಿಮರ್ಶೆ ಪಕ್ಷವನ್ನು ಜಡತೆಯಿಂದ ಹೊರತರುವ ಪ್ರಯತ್ನದ ಭಾಗವಾಗಿತ್ತು.

***

ಚುನಾವಣೆ ಹತ್ತಿರ ಬಂತು. ನೆಹರು ವಿರುದ್ಧ ಚುನಾವಣೆಗೆ ನಿಂತಿದ್ದ ಲೋಹಿಯಾ ಬಳಿ ಠೇವಣಿ ಕಟ್ಟುವಷ್ಟು ಹಣವೂ ಇರಲಿಲ್ಲ. ಗೆಳೆಯರು ಹಣ ಒಟ್ಟುಗೂಡಿಸಿದರು. ಚುನಾವಣಾ ಪ್ರಚಾರಕ್ಕೆಂದು ಊರೂರು ತಿರುಗಲು ಕಾರಾಗಲೀ ಜೀಪಾಗಲೀ ಇರಲಿಲ್ಲ. ಒಮ್ಮೊಮ್ಮೆ ಯಾರಾದರೂ ಗೆಳೆಯರು ಕಾರು ಕಳಿಸುತ್ತಿದ್ದರು. ಇನ್ನುಳಿದಂತೆ ಎತ್ತಿನ ಗಾಡಿಯಲ್ಲೇ ಲೋಹಿಯಾ ಮತ್ತು ಸಂಗಾತಿಗಳು ಊರೂರು ಸುತ್ತುತ್ತಿದ್ದರು; ಪ್ರಚಾರ ಮುಗಿಸಿ ರಾತ್ರಿ ತಡವಾಗಿ ವಾಪಸ್ ಬರುವ ಹೊತ್ತಿಗೆ ಹೋಟೆಲ್‌ಗಳೂ ತೆರೆದಿರುತ್ತಿರಲಿಲ್ಲ. ಎಲ್ಲರೂ ಸಿಕ್ಕಿದ್ದು ತಿಂದು ಮಲಗಬೇಕಾಗಿತ್ತು.

ಈ ಕಷ್ಟಗಳ ನಡುವೆಯೂ ಲೋಹಿಯಾಗೆ, 'ಭಾರತದ ಸಾಮಾನ್ಯ ಜನರು ಹಾಗೂ ಇಲ್ಲಿನ ಬಡವರು ಪ್ರಾಯಶಃ ನನ್ನನ್ನು ತಮ್ಮಲ್ಲೊಬ್ಬನೆಂಬಂತೆ ಕಾಣುತ್ತಿದ್ದಾರೆ. ಇದನ್ನು ಬಿಟ್ಟರೆ ನನ್ನ ಬಳಿ ಇನ್ನೇನೂ ಇಲ್ಲ' ಎಂಬ ಧನ್ಯತೆಯಿತ್ತು.

ಆಗ ಲೋಹಿಯಾ ಬರೆಯುತ್ತಾರೆ: 'ಈ ಹೆಸರನ್ನೇ ಬಂಡವಾಳವಾಗಿಟ್ಟುಕೊಂಡು ಹಳೆಯ ಬಂಡೆಗಲ್ಲುಗಳಿಗೆ ಡಿಕ್ಕಿ ಹೊಡೆದು ಅಪ್ಪಳಿಸಬೇಕಾಗಿದೆ. ಅದು ಯಾವುದೇ ಬಂಡೆಯಾಗಿರಲಿ, ಅದನ್ನು ಇಷ್ಟಿಷ್ಟೇ ಒಡೆಯಬಹುದು; ಆದರೆ ಈ ಬಂಡೆಯನ್ನೋ, ಆ ಬಂಡೆಯನ್ನೋ ಪಕ್ಕಾ ಒಡೆಯಲು ಎಷ್ಟು ಸಮಯವಾಗಬಹುದು ಎಂಬ ಬಗ್ಗೆ ಗ್ಯಾರಂಟಿಯಿಲ್ಲ. ಆದ್ದರಿಂದಲೇ ಎಲ್ಲ ದುಷ್ಟ ನೀತಿಗಳನ್ನೂ ಆಧಾರಶಿಲೆಯಿಂದ ಒಡೆದು ಹಾಕಬೇಕೆಂದು ತೀರ್ಮಾನ ಮಾಡಿದ್ದೇನೆ. ಅವು ಅಷ್ಟಿಷ್ಟು ಪುಡಿಯಾಗಬಹುದು. ಆದರೆ ಭಾರತದ ಸಾಮಾನ್ಯ ಜನರ ಅದೃಷ್ಟ ಖುಲಾಯಿಸಿದರೆ ಈ ಬಂಡೆ ಪುಡಿಪುಡಿಯಾಗಲೂಬಹುದು. ಆದ್ದರಿಂದಲೇ ಗೆಲ್ಲಲು ಬೇಕಾದಷ್ಟು ವೋಟು ಬರುತ್ತವೋ; ಕಡಿಮೆ ವೋಟು ಬರುತ್ತವೋ; ಅಥವಾ ಸೋಲುತ್ತೇನೋ ಈ ಬಗ್ಗೆ ನನಗೆ ಯಾವ ಮುಜುಗರವೂ ಇಲ್ಲ; ನನ್ನ ಕೆಲಸ ನಾನು ಮಾಡಬೇಕಷ್ಟೇ. ಆದರೆ ನಾನು ಗೆಲ್ಲಲು ಹೋರಾಡುತ್ತಿದ್ದೇನೆಂಬುದು ನಿಜ. ಒಂದು ವೇಳೆ ನಾನು ಗೆದ್ದರೆ ದೇಶದ ದುಃಖಿತ ಜನಕ್ಕೂ, ನನಗೂ ಸಂತೋಷವಾಗುವುದು.'

ಲೋಹಿಯಾ ಈ ವಿಚಾರಗಳನ್ನು ಚುನಾವಣಾ ಸಂದರ್ಭದಲ್ಲಿ ಸಮಾಜವಾದಿ ಪಕ್ಷ ಹೊರಡಿಸುತ್ತಿದ್ದ 'ಆಲದ ಮರದ ಮಾತು' ಎಂಬ ಚುನಾವಣಾ ವಾರ್ತಾಪತ್ರದಲ್ಲಿ ಬರೆಯುತ್ತಿದ್ದರು. ಸಮಾಜವಾದಿ ಪಕ್ಷದ ಚುನಾವಣಾ ಗುರುತು ಆಲದ ಮರ; ಪಕ್ಷದ ಮುಖವಾಣಿ 'ಆಲದ ಮರದ ಮಾತು.' ಸಮಾಜವಾದಿ ಪಕ್ಷ ಹೊರಡಿಸುತ್ತಿದ್ದ ಕರಪತ್ರಗಳೂ ವಿಶೇಷವಾಗಿದ್ದವು. ಲೋಹಿಯಾ ಹೊರಡಿಸಿದ ಒಂದು ಕರ ಪತ್ರ ಹೀಗೆ ಶುರುವಾಗಿತ್ತು:

'ಜನ ನಿಟ್ಟುಸಿರಿಡುತ್ತಿದ್ದಾರೆ. ದೇಶ ಮುರಿದು ಬೀಳುತ್ತಿದೆ. ಅದರ ಚೂರುಗಳನ್ನು ವಿದೇಶಿಯರು ನುಂಗುತ್ತಿದ್ದಾರೆ.'

ಈ ಸ್ಥಿತಿಯಿಂದ ದೇಶವನ್ನು ಪಾರು ಮಾಡಲು ಉಳಿದ ರಾಜಕೀಯ ಪಕ್ಷಗಳು ಅಸಮರ್ಥವಾಗಿವೆ ಎಂಬುದನ್ನು ವಿವರಿಸುತ್ತಾ ಕರಪತ್ರ ಕೊನೆಗೆ ಹೇಳುತ್ತದೆ: 'ಸಮಾಜವಾದಿ ಪಕ್ಷ ಮಾತ್ರ ರಾಷ್ಟ್ರೀಯತೆ, ಕ್ರಾಂತಿಕಾರಕತೆ, ಪ್ರಜಾಪ್ರಭುತ್ವಗಳನ್ನು ಗಟ್ಟಿಯಾಗಿ ನಂಬಿದ ಪಕ್ಷವಾಗಿದೆ. ಈ ಪಕ್ಷ ಮಾತ್ರ ಕಾಂಗ್ರೆಸನ್ನು ಸೋಲಿಸಬಲ್ಲದು.'

ಮಧು ದಂಡವತೆ, ಜಾರ್ಜ್ ಫರ್ನಾಂಡಿಸ್, ಕರ್ಪೂರಿ ಠಾಕೂರ್ ಮುಂತಾದ ಸಮಾಜವಾದಿ ನಾಯಕರೆಲ್ಲರೂ ಫೂಲ್‌ಪುರ ಕ್ಷೇತ್ರಕ್ಕೆ ಬಂದಿಳಿದರು. ಹಳ್ಳಿಹಳ್ಳಿಗಳಲ್ಲಿ ಸಮಾಜವಾದಿ ಹವಾ ಎದ್ದಿತು. ಫೂಲ್‌ಪುರ ಕ್ಷೇತ್ರದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ನೆಹರುಪುತ್ರಿ ಇಂದಿರಾ ಗಾಂಧಿ ಈ ಬೆಳವಣಿಗೆಗಳಿಂದ ಗಾಬರಿಯಾದರು. ಕಾಂಗ್ರೆಸ್ಸಿನ ಸ್ಟಾರ್ ಪ್ರಚಾರಕರಾಗಿ ದೇಶ ಸುತ್ತುತ್ತಿದ್ದ ಅಪ್ಪನಿಗೆ ತಮ್ಮ ಸ್ವಕ್ಷೇತ್ರಕ್ಕೆ ಬರಲು ಸಂದೇಶ ಕಳಿಸಿದರು. ಕೊನೆಗೂ ನೆಹರು ಲೋಹಿಯಾಗೆ ಕೊಟ್ಟ ವಚನ ಮುರಿದು, ಕೊನೆಯ ಮೂರು ದಿನ ಫೂಲ್‌ಪುರ ಕ್ಷೇತ್ರದಲ್ಲಿ ಬೀಡುಬಿಡಬೇಕಾಯಿತು!

ಫಲಿತಾಂಶ ನಿರೀಕ್ಷಿತವಾಗಿತ್ತು. ದೇಶಾದ್ಯಂತ ವಿರೋಧ ಪಕ್ಷಗಳು ಒಕ್ಕೂಟ ಮಾಡಿಕೊಳ್ಳದೆ ಪ್ರತ್ಯೇಕವಾಗಿ ಸ್ಪರ್ಧಿಸಿ ಧೂಳೀಪಟವಾಗಿದ್ದವು. ಕಾಂಗ್ರೆಸ್ಸಿಗೆ ಭಾರಿ ಬಹುಮತ ಸಿಕ್ಕಿತು. ಕಮ್ಯುನಿಸ್ಟ್ ಪಕ್ಷ ಶೇಕಡ ಹತ್ತರಷ್ಟು ಮತ ಗಳಿಸಿ, ಎರಡೂ ಸಮಾಜವಾದಿ ಪಕ್ಷಗಳನ್ನು ಮೂರನೆಯ ಸ್ಥಾನಕ್ಕೆ ದೂಡಿತು.

ಆದರೂ ನೆಹರು ಸುತ್ತ ಇದ್ದ ಪ್ರಭಾವಳಿಯನ್ನು ಲೋಹಿಯಾ ಮುರಿದಿದ್ದರು. ಶೇಕಡ 58.9 ಮತ ಪಡೆದ ನೆಹರು 1,18,931 ಮತ ಗಳಿಸಿದ್ದರು. ಶೇಕಡ 26.9 ಮತ ಪಡೆದ ಲೋಹಿಯಾ 54,360 ಮತ ಗಳಿಸಿದ್ದರು. 43 ಮತಗಟ್ಟೆಗಳಲ್ಲಿ ಲೋಹಿಯಾ ನೆಹರೂಗಿಂತ ಹೆಚ್ಚಿನ ಮತ ಪಡೆದಿದ್ದರು. 'ನೆಹರು ಪರವಾದ ಎರಡು ಮತಗಳ ಎದುರು ಒಂದು ಮತ ಸಮಾಜವಾದಿ ನಾಯಕನಿಗೆ ಸಂದಿದೆ' ಎಂದು ಮುಂಬೈನ 'ಟೈಮ್ಸ್ ಆಫ್ ಇಂಡಿಯಾ' ಬರೆಯಿತು. ಗ್ವಾಲಿಯರ್‌ನಲ್ಲಿ ಸುಖೋರಾಣಿ 9807 ಮತ ಪಡೆದಿದ್ದರು.

ಈ ಹಿನ್ನಡೆಗಳ ನಡುವೆ ಸಿಹಿ ಸುದ್ದಿಗಳೂ ಇದ್ದವು: ಲೋಹಿಯಾರ ಕೆಲವು ದಿಟ್ಟ ಸಮಾಜವಾದಿ ಸಂಗಾತಿಗಳ ಜೊತೆಗೆ, ಲೋಹಿಯಾ ಚಿಂತನೆಗಳನ್ನು ಆಳವಾಗಿ ಅರಿತಿದ್ದ ತರುಣ ಕಿಶನ್ ಪಟ್ನಾಯಕ್ ಲೋಕಸಭೆ ಪ್ರವೇಶಿಸಿದ್ದರು; ಅವರು ಲೋಕಸಭೆಯ ಅತ್ಯಂತ ಕಿರಿಯ ಸದಸ್ಯನಾಗಿದ್ದರು; ಕರ್ನಾಟಕದಲ್ಲಿ ಗೋಪಾಲಗೌಡರು ಮತ್ತೆ ಶಾಸಕರಾಗಿ ರಾಜ್ಯ ವಿಧಾನಸಭೆ ಪ್ರವೇಶಿಸಿದ್ದರು.

ಜನರ ಪರವಾದ ಪ್ರಶ್ನೆಗಳನ್ನೆತ್ತಿಕೊಂಡು ಹೋರಾಡುತ್ತಾ ಜೈಲುವಾಸ, ಕಷ್ಟನಷ್ಟಗಳನ್ನು ಎದುರಿಸಿದ್ದ ಧೀಮಂತ ಜನನಾಯಕನೊಬ್ಬ ಎರಡನೇ ಸಲ ಕೂಡ ಚುನಾವಣೆ ಪರೀಕ್ಷೆಯಲ್ಲಿ ಪಾಸಾಗಲಿಲ್ಲ. ಚುನಾವಣೆ ಮುಗಿದ ಕೆಲ ದಿನಗಳ ನಂತರ ಹೋಳಿಯ ದಿನ ರಮಾಗೆ ಬರೆದ ಪತ್ರದಲ್ಲಿ ಲೋಹಿಯಾ ಮನಸ್ಥಿತಿಯ ಚಿತ್ರಗಳು ಕಾಣುತ್ತವೆ:

ಪ್ರಿಯ ರಮಲಿ,

ಇವತ್ತು ಹೋಳಿ ಹಬ್ಬದ ದಿನ. ನನಗೆ ಹಿಂದಿನಿಂದಲೂ ಹೋಳಿಯಾಡುವ ಆಸೆಯಿರಲಿಲ್ಲ.

ಈ ಮನಸ್ಸು ಎನ್ನುವುದೇ ಒಂದು ವಿಚಿತ್ರ ವಸ್ತು. ಒಮ್ಮೆ ಮನಸ್ಸು ಕೆಟ್ಟರೆ ಅದನ್ನು ಮತ್ತೆ ತಹಬಂದಿಗೆ ತರುವುದೇ ಕಷ್ಟ. ನನ್ನ ಮನಸ್ಸಿನ ತಳಹದಿಯೇ ಕೆಟ್ಟು ಹೋಗಿದೆಯೆಂದು ನನಗನ್ನಿಸತೊಡಗಿದೆ. ಈಗ ಇದನ್ನು ತಹಬಂದಿಗೆ ತಂದು ನಿಭಾಯಿಸುವುದು ಕಷ್ಟವಾಗತೊಡಗಿದೆ. ದೇಶದ ಪರಿಸ್ಥಿತಿ ಸುಧಾರಣೆಯಾಗತೊಡಗಿದಾಗ ಮಾತ್ರ ನನ್ನ ಮನಸ್ಸು ತಹಬಂದಿಗೆ ಬರಬಹುದು. ಇದನ್ನು ನನ್ನ ಜೀವಿತ ಕಾಲದಲ್ಲಿ ನೋಡುವುದು ಕಷ್ಟಕರವೆಂದು ತೋರುತ್ತದೆ.'

ಈ ಪತ್ರ ಬರೆಯುವಾಗ ಲೋಹಿಯಾ ಕಿವಿಗೆ ಬಿದ್ದ ಗಝಲ್ ಅವರನ್ನು ತಲ್ಲಣಗೊಳಿಸುತ್ತದೆ:

ಆ ಉರ್ದು ಗಝಲ್ ಪ್ರೇಮದ ಗಝಲ್ಲೇನೋ ಹೌದು; ಆದರೆ ಅದು ಕೂಡ ನನ್ನ ಮನಸ್ಸನ್ನು ಕದಡಿಬಿಟ್ಟಿತು. ಕಾರಣ, ಅದು ದೇಶ ವಿಭಜನೆಯ ಕಾಲದಲ್ಲಿ ಬರೆದ ಗಝಲ್. ಇಂಥ ಗಝಲುಗಳನ್ನು ಈಗ ಯಾಕೆ ಬರೆಯುತ್ತಿಲ್ಲ? ಇದು ದೇಶ ವಿಭಜನೆಯ ಕಾಲ ಅಲ್ಲವೆಂದೇ? 'ಇದು ಬೆಳಗಾಗುವ ಮೊದಲಿನ ಕತ್ತಲು...' ಥರದ ಸಾಲು ಕೇಳಿದರೆ ನನಗೆ ತುಂಬ ದಿಗಿಲಾಗತೊಡಗುತ್ತದೆ...

...ಇಬ್ಬರು ಮನುಷ್ಯರನ್ನು ಒಟ್ಟಿಗೆ ತರುವುದು ನನಗೆ ಎಷ್ಟೋ ಸಲ ಕಷ್ಟವಾಗುತ್ತದೆ. ಮತ್ತೆ ಅದೇ ವ್ಯಕ್ತಿವಾದ. ಮತ್ತೆ ಅದೇ ರಾಷ್ಟ್ರೀಯತೆ. ಭಾರತದ ಗಂಗಾ, ರಷ್ಯಾದ ವೋಲ್ಗಾ, ಅಮೆರಿಕದ ಮಿಸಿಸಿಪ್ಪಿ ನದಿಗಳು ಅಂತರರಾಷ್ಟ್ರೀಯತೆ ಎನ್ನುವುದು ಸಂಭವಿಸಲು ಬಿಡುವುದೇ ಇಲ್ಲವೇನೋ ಎಂದು ನನಗನ್ನಿಸುತ್ತದೆ.'

ನಿನ್ನ
ರಾಮ್‌ಮನೋಹರ್

ಚುನಾವಣೆಯ ನಂತರದ ಕಾಲದಲ್ಲಿ ಸ್ವಂತದ ನಿರಾಶೆಗಿಂತ ಹೆಚ್ಚಾಗಿ ರಾಷ್ಟ್ರೀಯ, ಅಂತರರಾಷ್ಟ್ರೀಯ ನಿರಾಶೆ ಲೋಹಿಯಾರನ್ನು ಮುತ್ತತೊಡಗಿತು. ನಿರಾಶೆಯ ಕಾಲದ ಕರ್ತವ್ಯಗಳ ಬಗ್ಗೆ ಲೋಹಿಯಾ ಗಂಭೀರವಾಗಿ ಯೋಚಿಸತೊಡಗಿದರು. 1962ರಲ್ಲಿ ಭಾರತದ ಗಡಿ ಪ್ರದೇಶದಲ್ಲಿ ಚೀನಾದ ಉಪಟಳ ಶುರುವಾಯಿತು. ಎರಡು ದಶಕಗಳಿಂದಲೂ ಲೋಹಿಯಾ ಚೀನಾದ ವಿಸ್ತರಣೆಯ ದಾಹದ ನಡೆಗಳನ್ನು ಕುರಿತು ಎಚ್ಚರಿಸುತ್ತಲೇ ಇದ್ದರು. ಅವರ ಮುನ್ನೋಟದ ಮಾತುಗಳನ್ನು ದೇಶ ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

(ಸಶೇಷ)